# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **88** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ಮಧು ಜಿ. ಮಾದೇಗೌಡ (ದಕ್ಷಿಣ ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | : | **08.12.2025** |
| **ಉತ್ತರಿಸುವ ಸಚಿವರು** | : | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.** |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಶಿಶುಗಳ ಮರಣ ಪ್ರಮಾಣ ತಗ್ಗಿಸುವ ನಿಟ್ಟಿನಲ್ಲಿ ರಾಜ್ಯದ ಯಾವ ಯಾವ ಜಿಲ್ಲೆಗಳ ಸರ್ಕಾರಿ ಆಸ್ಪತ್ರೆಗಳಲ್ಲಿ 'ತಾಯಿ ಹಾಲು ಬ್ಯಾಂಕ್' ಅನ್ನು ಸ್ಥಾಪಿಸಲಾಗಿದೆ; (ವಿವರ ನೀಡುವುದು)</td><td>ಶಿಶುಗಳ ಮರಣ ಪ್ರಮಾಣ ತಗ್ಗಿಸುವ ನಿಟ್ಟಿನಲ್ಲಿ ರಾಜ್ಯದ ಈ ಕೆಳಕಂಡ 12 ಸರ್ಕಾರಿ ಆಸ್ಪತ್ರೆಗಳಲ್ಲಿ ತಾಯಿಯ ಎದೆ ಹಾಲಿನ ಸಮಗ್ರ ನಿರ್ವಹಣಾ ಕೇಂದ್ರ "ತಾಯಿ ಹಾಲು ಬ್ಯಾಂಕ್" ಗಳನ್ನು ಸ್ಥಾಪಿಸಲಾಗಿದೆ.
<table>
<tr><th>ಕ.ಸಂ</th><th>ಜಿಲ್ಲೆ</th><th>ಆಸ್ಪತ್ರೆ</th></tr>
<tr><td>1</td><td>ಬೆಂಗಳೂರು ನಗರ</td><td>ವಾಣಿ ವಿಲಾಸ ಆಸ್ಪತ್ರೆ</td></tr>
<tr><td>2</td><td>ಬೆಂಗಳೂರು ನಗರ</td><td>ಹೆಚ್.ಎಸ್.ಐ.ಎಸ್. ಘೋಷಾ ಆಸ್ಪತ್ರೆ</td></tr>
<tr><td>3</td><td>ಬೆಂಗಳೂರು ನಗರ</td><td>ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ</td></tr>
<tr><td>4</td><td>ಬೆಳಗಾವಿ</td><td>ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ</td></tr>
<tr><td>5</td><td>ದಕ್ಷಿಣಕನ್ನಡ.</td><td>ಸರ್ಕಾರಿ ಲೇಡಿ ಗೋಶನ್ ಆಸ್ಪತ್ರೆ</td></tr>
<tr><td>6</td><td>ಕೋಲಾರ</td><td>ಎಸ್.ಎನ್.ಆರ್. ಜಿಲ್ಲಾ ಆಸ್ಪತ್ರೆ</td></tr>
<tr><td>7</td><td>ಶಿವಮೊಗ್ಗ</td><td>ಶಿವಮೊಗ್ಗ ವೈದ್ಯಕೀಯ ವಿಜ್ಞಾನ ಸಂಸ್ಥೆ</td></tr>
<tr><td>8</td><td>ಹಾಸನ</td><td>ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ</td></tr>
<tr><td>9</td><td>ಧಾರವಾಡ</td><td>ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ</td></tr>
<tr><td>10</td><td>ಬಳ್ಳಾರಿ</td><td>ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ</td></tr>
<tr><td>11</td><td>ಕಲಬುರ್ಗಿ</td><td>ಗುಲ್ಬರ್ಗಾ ವೈದ್ಯಕೀಯ ವಿಜ್ಞಾನ ಸಂಸ್ಥೆ</td></tr>
<tr><td>12</td><td>ವಿಜಯಪುರ</td><td>ಜಿಲ್ಲಾ ಆಸ್ಪತ್ರೆ, ವಿಜಯಪುರ</td></tr>
</table>
</td></tr>
<tr><td>ಆ)</td><td>ರಾಜ್ಯದಲ್ಲಿ ಪ್ರತಿ ವರ್ಷ ಸುಮಾರು ಎಷ್ಟು ಸಂಖ್ಯೆಯ ಮಕ್ಕಳು ನಾನಾ ಕಾರಣಗಳಿಗಾಗಿ ತಾಯಿ ಹಾಲು ಸಿಗದೆ ತೊಂದರೆ ಅನುಭವಿಸುತ್ತಿದ್ದಾರೆ; ಹಾಗೇ, ಎಷ್ಟು ಸಂಖ್ಯೆ ಮಕ್ಕಳು 'ತಾಯಿ ಹಾಲು ಬ್ಯಾಂಕ್ ' ನ ಪ್ರಯೋಜನ ಪಡೆಯುತ್ತಿದ್ದಾರೆ; (ವಿವರ ನೀಡುವುದು)</td><td>ತಾಯಿಯ ಎದೆ ಹಾಲಿನ ಕೊರತೆ ಸಾಮಾನ್ಯವಾಗಿ ತಾತ್ಕಾಲಿಕ ವೈದ್ಯಕೀಯ ಸ್ಥಿತಿ ಆಗಿದ್ದು, ಸೂಕ್ತ ಮಾರ್ಗದರ್ಶನ, ಸಮಾಲೋಚನೆ ಹಾಗೂ ಚಿಕಿತ್ಸೆಗಳ ಮೂಲಕ ನಿವಾರಣೆಯಾಗುವುದರಿಂದ ತಾಯಿ ಹಾಲು ಲಭ್ಯವಾಗದೇ ತೊಂದರೆ ಅನುಭವಿಸುವ ಶಿಶುಗಳ ಕುರಿತು ನಿರ್ದಿಷ್ಟ ಅಂಕಿಅಂಶಗಳನ್ನು ರಾಜ್ಯ ಮಟ್ಟದಲ್ಲಿ ಸಂಗ್ರಹಿಸಲಾಗುತ್ತಿಲ್ಲ.<br><br>2025-26ನೇ ಸಾಲಿನಲ್ಲಿ ಏಪ್ರಿಲ್ ತಿಂಗಳಿನಿಂದ ದಿನಾಂಕ:24.11.2025ರವರೆಗೆ, ಒಟ್ಟು 3801 ನವಜಾತ ಶಿಶುಗಳು ತಾಯಿ ಹಾಲು ಬ್ಯಾಂಕ್‌ಗಳ ಸೇವೆಯಿಂದ ಪ್ರಯೋಜನ ಪಡೆದಿದ್ದಾರೆ.</td></tr>
</table>

| | | |
|---|---|---|
| ಇ) | ರಾಜ್ಯ ಎಲ್ಲಾ ಜಿಲ್ಲಾ ಕೇಂದ್ರಗಳ ಸರ್ಕಾರಿ ಆಸ್ಪತ್ರೆಗಳಲ್ಲಿ 'ತಾಯಿ ಹಾಲು ಬ್ಯಾಂಕ್' ಗಳನ್ನು ಸ್ಥಾಪಿಸುವ ಕುರಿತು ಸರ್ಕಾರದ ನಿಲುವೇನು; | 2024-26ನೇ ಸಾಲಿನಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ 8 ಜಿಲ್ಲಾ ಆಸ್ಪತ್ರೆ/ವೈದ್ಯಕೀಯ ವಿಜ್ಞಾನ ಸಂಸ್ಥೆಗಳಲ್ಲಿ 'ತಾಯಿ ಹಾಲು ಬ್ಯಾಂಕ್' ಗಳನ್ನು ಸ್ಥಾಪಿಸಲು ಅನುಮೋದನೆ ದೊರೆತಿದ್ದು, ಅವುಗಳ ಸ್ಥಾಪನಾ ಪ್ರಕ್ರಿಯೆ ಪ್ರಗತಿಯಲ್ಲಿದೆ. ರಾಜ್ಯದ ಇತರೆ ಎಲ್ಲಾ ಜಿಲ್ಲಾ ಕೇಂದ್ರಗಳ ಸರ್ಕಾರಿ ಆಸ್ಪತ್ರೆಗಳಲ್ಲಿ 'ತಾಯಿ ಹಾಲು ಬ್ಯಾಂಕ್' ಗಳನ್ನು ಹಂತ ಹಂತವಾಗಿ ಸ್ಥಾಪಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆ. |
| ಈ) | ಖಾಸಗಿ ಆಸ್ಪತ್ರೆಗಳಲ್ಲಿ ಐವಿಎಫ್ (ಇನ್-ವಿಟ್ರೋ ಫರ್ಟಿಲೈಸೇಶನ್) ಚಿಕಿತ್ಸೆಯ ವೆಚ್ಚ ದುಬಾರಿ ಇರುವುದರಿಂದ ರಾಜ್ಯದ ಎಲ್ಲಾ ಪ್ರಮುಖ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ನೀಡಲು ಐವಿಎಫ್ ಚಿಕಿತ್ಸಾ ಕೇಂದ್ರ ಆರಂಭಿಸುವ ನಿಟ್ಟಿನಲ್ಲಿ ಸರ್ಕಾರದ ಕ್ರಮವೇನು? (ಸಂಪೂರ್ಣ ವಿವರ ನೀಡುವುದು) | ಪ್ರಸ್ತುತ ರಾಜ್ಯದಲ್ಲಿ ಖಾಸಗಿ ಐ.ವಿ.ಎಫ್. ಚಿಕಿತ್ಸಾಲಯಗಳು ಕಾರ್ಯ ನಿರ್ವಹಿಸುತ್ತಿದ್ದು, ಸರ್ಕಾರಿ ಆಸ್ಪತ್ರೆಯಾದ ESIC Medical College, PGIMRS and Hospital, Rajajinagara, Bengaluru ಚಿಕಿತ್ಸಾಲಯಕ್ಕೆ , ART LEVEL - 1 ನೋಂದಣಿ ಪರವಾನಗಿಯನ್ನು ಮತ್ತು ART Centre, Commando Hospital Air Force, Bengaluru ಚಿಕಿತ್ಸಾಲಯಕ್ಕೆ ART LEVEL- 2 ನೋಂದಣಿ ಪರವಾನಗಿಯನ್ನು ನೀಡಿದ್ದು, Commando Hospital Air Force ಚಿಕಿತ್ಸಾಲಯದಲ್ಲಿ ಸೇನಾ ಸಿಬ್ಬಂದಿಗಳಿಗೆ ಮಾತ್ರ ಚಿಕಿತ್ಸೆಯನ್ನು ನೀಡಲಾಗುತ್ತದೆ.<br><br>ಯಾವುದೇ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಐ.ವಿ.ಎಫ್ . ಚಿಕಿತ್ಸೆಯನ್ನು ಒದಗಿಸಲು ಸೌಲಭ್ಯವಿರುವುದಿಲ್ಲ. |

**ಸಂಖ್ಯೆ: ಆಕುಕ 99 ಎಸ್.ಟಿ.ಕ್ಯೂ 2025**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು